ಇದರ ಸೇವೆಯನ್ನು 4ನೇ ಹಂತದ ಬದಲು 5ನೇ ಹಂತದವರೆಗೆ ವಿಸ್ತರಿಸಿ ಸಂಚರಿಸಲು ಕ್ರಮ ವಹಿಸಲಾಗುವುದೇ

ಉ) ಯಲಹಂಕ ಉಪನಗರದ ಇದೇ ಬಡಾವಣೆಯಿಂದ ಮೆಟ್ರೊ ಬಸ್ ಸೌಲಭ್ಯ ವಿಲ್ಲದ ಕಾರಣ ಬಿ ಟಿ ಎಂ ಬಡಾವಣೆಯ ವರೆಗೆ ಮೆಟ್ರೋ ಸೇವೆಯನ್ನು ಪ್ರಾರಂಭಿಸಲು ಪರಿಶೀಲಿಸಲಾಗುವುದೇ?

ಶ್ರೀ ಬಿ ರಮಾನಾಥ್ ರೈ (ಸಾರಿಗೆ ಸಚಿವರು)

ಅ) ಹೌದು

ಆ) ಹೌದು

ಇ) ಜಂಟಿ ವಾಹನವನ್ನು ದುರಸ್ಥಿಗೊಳಿಸಲು ನಿಲ್ಲಿಸಿದ್ದು, ಈ ಬಸ್ಸಿನ ಬದಲಾಗಿ ಸಾಮಾನ್ಯ ಬಸ್ಸನ್ನು ಆಚರಣೆಗೊಳಿಸಲಾಗುತ್ತಿದ್ದು, ಈಗ ಒಂದು ಜಂಟಿ ವಾಹನವನ್ನು ಕಾರ್ಯಾಚರಣೆಗೊಳಿಸಲು ಕ್ರಮ ಜರುಗಿಸಲಾಗಿದೆ

ಈ) ಜಂಟಿ ವಾಹನವನ್ನು ಆಚರಣೆಗೊಳಿಸುತ್ತಿರುವುದರಿಂದ, ಎರಡು ಬಸ್ಸುಗಳ ಅವಶ್ಯಕತೆ ಇರುವುದಿಲ್ಲ ಹಾಗೂ 4ನೇ ಹಂತದ ಬದಲು 5ನೇ ಹಂತಕ್ಕೆ ವಿಸ್ತರಿಸಿ ಆಚರಣೆಗೊಳಿಸಲಾಗುವುದು

ಉ) ಸದ್ಯಕ್ಕೆ ಪರಿಶೀಲನೆಯಲ್ಲಿಲ್ಲ

ಯಲಹಂಕ ನಗರ ಸಭಾ ವ್ಯಾಪ್ತಿಯ ನಾಲ್ಕನೇ ಹಂತದ ರಸ್ತೆಗಳನ್ನು ದುರಸ್ತಿ ಮಾಡುವ ಬಗ್ಗೆ

85 (469) ಶ್ರೀ ಸುಬ್ಬಾರೆಡ್ಡಿ ಕೆ ಎಸ್ (ಬಸವನಗುಡಿ) ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಯಲಹಂಕ ನಗರ ಸಭೆಯ ವ್ಯಾಪ್ತಿಗೆ ಬರುವ ನಾಲ್ಕನೇ ಹಂತದ ಎಲ್ಲಾ ರಸ್ತೆಗಳು ದುಸ್ಥಿತಿಯಲ್ಲಿದ್ದು, ಬೆಂಗಳೂರು ಮಹಾನಗರ ಪಾಲಿಕೆಯು ರಸ್ತೆಗಳ ಗುಂಡಿಗಳನ್ನು ಮುಚ್ಚುವ ರೀತಿಯಲ್ಲಿ ರಸ್ತೆಗಳನ್ನು ದುರಸ್ಥಿಗೊಳಿಸಲು ಸರ್ಕಾರವು ಕೂಡಲೇ ಕ್ರಮ ಕೈಗೊಳ್ಳುವುದೇ?

ಶ್ರೀ ಡಿ ಕೆ ಶಿವಕುಮಾರ್ (ನಗರಾಭಿವೃದ್ಧಿ ಸಚಿವರು)

ಅ) ಹೌದು

ನಕಲಿ ಛಾಪಾ ಕಾಗದ ಹಗಣ ಕುರಿತು

87 (257) ಶ್ರೀ ಸುರೇಶ್ ಕುಮಾರ್ ಎಸ್ (ರಾಜಾಜಿನಗರ) ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನಕಲಿ ಸ್ಟಾಂಪ್ ಪೇಪರ್ ಹಗರಣ ಕುರಿತಂತೆ ರಾಜ್ಯದಲ್ಲಿ ವಿಶೆಷ ನ್ಯಾಯಾಲಯವನ್ನು ಸ್ಥಾಪಿಸಲಾಗಿದೆಯೆ

ಆ) ಸ್ಥಾಪಿಸಿದ್ದರೆ ಅದು ಎಂದಿನಿಂದ ಅಸ್ತಿತ್ವಕ್ಕೆ ಬಂದಿದೆ

ಇ) ಈ ನ್ಯಾಯಾಲಯಕ್ಕೆ ನಿಯೋಜಿಸಲಾಗಿರುವ ಸಿಬ್ಬಂದಿಯ ವಿವರಗಳನ್ನು ನೀಡುವುದು (ಯಾವ್ಯಾವ ಇಲಾಖೆಯಿಂದ ನಿಯೋಜಿಸಲಾಗಿದೆ)

ಈ) ಇದುವರೆವಿಗೂ ವಿಶೇಷ ನ್ಯಾಯಾಲಯದಿಂದ ಆಗಿರುವ ಪ್ರಗತಿಯೇನು?

ಶ್ರೀ ಡಿ ಬಿ ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು)

ಅ) ಹೌದು

ಆ) ದಿನಾಂಕ 24-11-2003 ರಿಂದ ಕಾರ್ಯ ನಿರ್ವಹಿಸುತ್ತಿದೆ

ಇ) ಸರಕು ಖರೀದಿ ನಿರ್ದೇಶನಾಲಯ, ಬೆಂಗಳೂರು ಇಲ್ಲಿಂದ ಈ ಕೆಳಕಂಡ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ

1)	ಪ್ರಥಮ ದರ್ಜೆ ಸಹಾಯಕ	–	2
2)	ದ್ವಿತೀಯ ದರ್ಜೆ ಸಹಾಯಕ	–	1
3)	ಬೆರಳಚ್ಚುಗಾರರು	–	2
4)	ದಲಾಯತ್	–	3

ಈ) ಪ್ರಕರಣಗಳು ವಿಚಾರಣೆಯಲ್ಲಿವೆ

ರಾಜ್ಯ ಸರ್ಕಾರದ ಸ್ವಾಮ್ಯದಲ್ಲಿ ನಡೆಸುತ್ತಿರುವ ಲಾಟರಿ ಡ್ರಾಗಳ ಬಗ್ಗೆ

88 (258) ಶ್ರೀ ಸುರೇಶ್ ಕುಮಾರ್ ಎಸ್ (ರಾಜಾಜಿನಗರ) ಮಾನ್ಯ ಸಣ್ಣ ಉಳಿತಾಯ, ರಾಜ್ಯ ಲಾಟರಿ, ವಿಮೆ ಹಾಗೂ ಆಗ್ರೋ, ಪ್ರೋಸೆಸ್ಸಿಂಗ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ಸರ್ಕಾರದ ಸ್ವಾಮ್ಯದಲ್ಲಿರುವ ಎಂ ಎಸ್ ಐ ಎಲ್ ಪ್ರತಿದಿನ ನಡೆಸುತ್ತಿರುವ ಲಾಟರಿ ಡ್ರಾಗಳ ಸಂಖ್ಯೆ ಎಷ್ಟು

ಆ) ಈ ಲಾಟರಿ ಡ್ರಾಗಳ ಸಂಖ್ಯೆ ಎಷ್ಟು

ಇ) ಎಂ ಎಸ್ ಐ ಎಲ್ ಸಂಸ್ಥೆ ಹೊರತುಪಡಿಸಿ ರಾಜ್ಯದಲ್ಲಿ ಯಾವ ಯಾವ ರಾಜ್ಯಗಳ ಲಾಟರಿಗಳ ಎಷ್ಟು ಡ್ರಾಗಳು ನಡೆಯುತ್ತಿದೆ ವಿವರಗಳನ್ನು ನೀಡುವುದು

ಈ) ಇವುಗಳಿಂದ ರಾಜ್ಯ ಸರ್ಕಾರಕ್ಕೆ ಬರುತ್ತಿರುವ ಆದಾಯವೆಷ್ಟು?

ಶ್ರೀ ಬಾಬುರಾವ್ ಬಸವಣ್ಣಪ್ಪ ಚಿಂಚನ್ಸೂರ್ (ಸಣ್ಣ ಉಳಿತಾಯ, ರಾಜ್ಯ ಲಾಟರಿ, ವಿಮೆ ಹಾಗೂ ಆಗ್ರೋ, ಪ್ರೋಸೆಸ್ಸಿಂಗ್ ರಾಜ್ಯ ಸಚಿವರು)

ಅ) ಕರ್ನಾಟಕ ರಾಜ್ಯ ಸರ್ಕಾರವು ಮೆ ಎಂ ಎಸ್ ಐ ಎಲ್ ಮೂಲಕ ಪ್ರತಿದಿನ 7 ಲಾಟರಿ ಡ್ರಾಗಳನ್ನು ಮಂಗಳವಾರ, ಶುಕ್ರವಾರ ಹಗೂ ಶನಿವಾರಗಳಂದು 8 ಲಾಟರಿಗಳನ್ನು ನಡೆಸಲಾಗುತ್ತಿದೆ

ಆ) ಪ್ರತಿದಿನ 7 ಲಾಟರಿ ಡ್ರಾಗಳನ್ನು, ಮಂಗಳವಾರ, ಶುಕ್ರವಾರ ಹಾಗೂ ಶನಿವಾರಗಳಂದು 8 ಲಾಟರಿಗಳನ್ನು ನಡೆಸಲಾಗುತ್ತಿದೆ

ಇ) ಲಾಟರಿ ಮುಕ್ತ ವಲಯ ವಲ್ಲದ ರಾಜ್ಯಗಳಲ್ಲಿ ಇತರೆ ರಾಜ್ಯ ಲಾಟರಿಯನ್ನು ನಡೆಸಲು ಲಾಟರಿ ರೆಗ್ಯುಲೇಷನ್ ಆಕ್ಟ್ 98ರ ಅನ್ವಯ ಅವಕಾಶವಿದೆ ಪ್ರಸ್ತುತ 8 ರಾಜ್ಯಗಳು ಕರ್ನಾಟಕ ರಾಜ್ಯದಲ್ಲಿ ತಮ್ಮ ಲಾಟರಿಗಳನ್ನು ನಡೆಸುತ್ತಿವೆ ದಿನಾಂಕ 10 12 2003 ರಿಂದ ಜಾರಿಗೆ ಬಂದಿರುವ ಲಾಟರಿ ತೆರಿಗೆ ಸುಗ್ರಿವಾಜ್ಞೆ ಹಿನ್ನೆಲೆಯಲ್ಲಿ ಡ್ರಾಗಳ ವಿವರಗಳನ್ನು ಸಂಗ್ರಹಿಸಲಾಗುತ್ತಿದೆ

ಈ) ಪ್ರಸ್ತುತ ರಾಜ್ಯ ಸರ್ಕಾರಕ್ಕೆ ದಿ 10 12 03 ರಿಂದ ಜಾರಿಗೊಳಿಸಿರುವ ಬೆಟ್ಟಿಂಗ್ (ಲಾಟರಿ) ತೆರಿಗೆ ಸುಗ್ರೀವಾಜ್ಞೆ ಹೊರಡಿಸಿರುವ ಹಿನ್ನೆಲೆಯಲ್ಲಿ ಪ್ರತಿದಿನ ಸುಮಾರು 35 ರಿಂದ 40 ಲಕ್ಷ ಆದಾಯ ನಿರೀಕ್ಷಿಸಿದೆ